# ಡಾಕ್ಟ್ರೇ, ಕಳೆದ 1 ತಿಂಗಳಿನಲ್ಲಿ ನನ್ನ ತೂಕ 10 ಕೆಜಿ ಹೆಚ್ಚಳವಾಗಿದೆ

**ಆತ್ಮೀಯ ಓದುಗರೇ, ಡಾ. ಕಿರಣ್ ಕುಮಾರ್ ಎಂಬ ನಾನು ನಿಮ್ಮೊಂದಿಗೆ ನನ್ನ ಒಂದು ಅನುಭವವನ್ನು ಹಂಚಿಕೊಳ್ಳಲು ಬಯಸುತ್ತಿದ್ದೇನೆ... ಈಗ್ಗೆ 1 ವರ್ಷದ ಹಿಂದೆ ವ್ಯಕ್ತಿಯೊಬ್ಬರು ತಮ್ಮ ಮುಖದಲ್ಲಿ ಸಾಕಷ್ಟು ಭಯಾತಂಕ ತುಂಬಿಕೊಂಡು ನನ್ನ ಬಳಿಗೆ ಧಾವಿಸಿ ಬಂದರು ಮತ್ತು ಅತೀವ ಧಾವಂತದಿಂದ ತಮ್ಮದೇ ಆದ ಶೈಲಿಯಲ್ಲಿ ತಮ್ಮ ಸಮಸ್ಯೆಯನ್ನು ಹೇಳತೊಡಗಿದ್ದರು...**

"ಡಾಕ್ಟ್ರೇ, ನಾನೊಬ್ಬ ಸಾಫ್ಟ್‌ವೇರ್ ಪ್ರೊಫೆಶನಲ್. ಕಳೆದ ತಿಂಗಳು ನನ್ನ ತೂಕ 75 ಕೆ.ಜಿ ಆಗಿತ್ತು ಆದರೆ ಈ ತಿಂಗಳು ಧಿಡೀರಾಗಿ 85 ಕೆ.ಜಿ ಆಗಿದೆ. ಇತ್ತೀಚೆಗೆ ಕೆಲಸದಲ್ಲಿ ಕೂಡ ಬಹುಬೇಗ ಸುಸ್ತಾಗುತ್ತಿದೆ. ಹಸಿವು ಆಗುತ್ತಿಲ್ಲ ಮತ್ತು ಮಲಬದ್ಧತೆಯ ಸಮಸ್ಯೆ ಕೂಡ ಸತಾಯಿಸುತ್ತಿದೆ. ಇದನ್ನೆಲ್ಲ ಕಂಡು, ಅದ್ಯಾವ ಕಾಯಿಲೆ ಅಂಟಿಕೊಂಡಿದೆಯೊ ಏನೋ ನನಗೆ ಎಂದು ಭಯವಾಗುತ್ತಿದೆ." ಎಂದು ಅವಲತ್ತುಕೊಂಡರು.

**ಇದನ್ನೆಲ್ಲ ಗಮನವಿಟ್ಟು ಆಲಿಸಿದ ನಾನು, ಸಾಂತ್ವನದ ನಗು ಬೀರುತ್ತ ಈ ಕೆಳಗಿನ ತಪಾಸಣೆಗಳನ್ನು ಮಾಡಿಸಿಕೊಳ್ಳಿ ಎಂದು ಸೂಚಿಸಿದೆ**

**1. ಥೈರಾಯ್ಡ್ ಪ್ರೊಫೈಲ್ 2. ಲಿಪಿಡ್ ಪ್ರೊಫೈಲ್ 3. ಕಂಪ್ಲೀಟ್ ಬ್ಲಡ್ ಪಿಕ್ಚರ್ ಟೆಸ್ಟ್**

ಮಾರನೆಯ ದಿನವೇ ಆ ರೋಗಿಯು ತಪಾಸಣಾ ವರದಿಗಳ ಸಮೇತ ಆಗಮಿಸಿ ನನ್ನನ್ನು ಭೇಟಿಯಾದರು. ಅವರ **ಟಿಎಸ್‌ಎಚ್ ಮಟ್ಟವು** 35 ಐಯುಇ ಸಿಬಿಪಿ ಎಂದಾಗಿಯೂ ಮತ್ತು ಲಿಪಿಡ್ ಪ್ರೊಫೈಲ್ ಸಹಜವಾಗಿದೆ ಎಂದೂ ವರದಿಯಾಗಿತ್ತು. ನಂತರ **ಅವರ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿದ ಬಳಿಕ** ನಾನು ಅವರಿಗೆ, ಕಾನ್‌ಸ್ಟಿಟ್ಯೂಷನ್ ಆಧಾರಿತ ಸಿಮಿಲಿಯಂ (ಔಷಧಿ) ಜೊತೆಗೆ ಡಯೆಟ್ ಚಾರ್ಟ್, ವ್ಯಾಯಾಮ ಮತ್ತು ನಿರ್ವಹಣಾ ಯೋಜನೆಗಳನ್ನು ಬರೆದುಕೊಟ್ಟೆ.

ಮುಂದಿನ ತಿಂಗಳಿನಲ್ಲಿ ಅವರ ಹಸಿವಿನ ಸಮಸ್ಯೆ ನಿವಾರಣೆಗೊಂಡು ಕೆಲಸದಲ್ಲಿ ಅವರಿಗೆ ಒಂದಿಷ್ಟು ಚಾಕಚಕ್ಯತೆಯು ಮೈಗೂಡಿಕೊಂಡಿತ್ತು ಹಾಗೂ ಅವರ ತೂಕ ಸುಮಾರು 83 ಕೆ.ಜಿ.ಗೆ ಕಡಿತಗೊಂಡಿತ್ತು. ಬಳಿಕ ಎರಡನೇ ತಿಂಗಳಿನಲ್ಲಿ ಅವರ ತೂಕ 80 ಕೆ.ಜಿ.ಗೆ ಕುಸಿತಗೊಂಡಿತ್ತು ಮತ್ತು ಮೂರನೇ ತಿಂಗಳಿನಲ್ಲಿ 75 ಕೆ.ಜಿ.ಗೆ ಕುಸಿದು ರೋಗಿಯು ಸಾಕಷ್ಟು ನಿರಾಳ ಮತ್ತು ಎನರ್ಜೆಟಿಕ್ ಅನುಭೂತಿಯನ್ನು ಅನುಭವಿಸತೊಡಗಿದ್ದರು.

**ಇವೆಲ್ಲ ಬದಲಾವಣೆಗಳನ್ನು ಗಮನಿಸಿದ ನಾನು ಮತ್ತೊಮ್ಮೆ ಅವರಿಗೆ ಥೈರಾಯ್ಡ್ ಪ್ರೊಫೈಲ್ ಪರೀಕ್ಷೆ ಮಾಡಿಸಿಕೊಳ್ಳಲು ಸೂಚಿಸಿದೆ ಮತ್ತು ಇದೀಗ ಅವರ ಟಿಎಸ್‌ಎಚ್ ಮಟ್ಟವು 10ಐಯು ಎಂದು ದಾಖಲಾಗಿತ್ತು.**

ಹೀಗಾಗಿ, ನಾನು ಅವರಿಗೆ ಡಯೆಟ್, ವ್ಯಾಯಾಮ ಮತ್ತು ಔಷಧಿಯನ್ನು ನಿಯಮಿತವಾಗಿ ಮುಂದುವರೆಸಲು ಸೂಚಿಸಿದೆ. ಒಂದು ವರ್ಷ ನಿಯಮಿತ ಚಿಕಿತ್ಸೆ ಹಾಗೂ ಪ್ರತಿ ಮೂರು ತಿಂಗಳಿಗೊಮ್ಮೆ ಥೈರಾಯ್ಡ್ ಪ್ರೊಫೈಲ್ ಪರಿವೀಕ್ಷಣೆಯ ಮೂಲಕ ಅವರಲ್ಲಿ ಸಹಜ ಮಟ್ಟದ ಪ್ರೊಫೈಲ್ ನಿರ್ವಹಣೆಯಾಗುತ್ತಿರುವುದು ಖಚಿತವಾಯಿತು. ಕ್ರಮೇಣ ಅವರ ತೂಕವು ಬಿಎಂಐ ಅನುಗುಣವಾದ ಸಹಜ ತೂಕಕ್ಕೆ ತಲುಪಿತ್ತು.

**ಆದ್ದರಿಂದ, ಥೈರಾಯ್ಡ್‌ನಿಂದ ಬಳಲುತ್ತಿರುವ ಅಥವಾ ಥೈರಾಯ್ಡ್‌ನ ಸೂಚನೆಗಳು ಮತ್ತು ಲಕ್ಷಣಗಳನ್ನು ಹೊಂದಿರುವ ಪ್ರತಿಯೊಬ್ಬರಿಗೂ ನನ್ನ ಸಲಹೆ ಏನೆಂದರೆ, ದಯವಿಟ್ಟು ನಿಮ್ಮ ಆರೋಗ್ಯವನ್ನು ನಿರ್ಲಕ್ಷಿಸಿದೆ ನಮ್ಮ ಪಾಸಿಟಿವ್ ಹೋಮಿಯೋಪತಿ ಕ್ಲಿನಿಕ್‌ಗಳಲ್ಲಿ ಕಾನ್‌ಸ್ಟಿಟ್ಯೂಷನಲ್ ಹೋಮಿಯೋಪತಿ ಚಿಕಿತ್ಸೆಯನ್ನು ಪಡೆದುಕೊಳ್ಳಿರಿ ಮತ್ತು ನಿರಾತಂಕದಿಂದ ಜೀವಿಸಿರಿ.**

**ಟಿಎಸ್‌ಎಚ್ ಮಟ್ಟ:** ಟಿಎಸ್‌ಎಚ್ ಎಂದರೆ ಥೈರಾಯ್ಡ್ ಸ್ಟಿಮ್ಯುಲೇಟಿಂಗ್ ಹಾರ್ಮೋನ್ ಎಂದರ್ಥ. ಈ ಹಾರ್ಮೋನ್ ಥೈರಾಯ್ಡ್ ಗ್ರಂಥಿಯಿಂದ ಬಿಡುಗಡೆಯಾಗುತ್ತದೆ ಮತ್ತು ಇದೇ ಹಾರ್ಮೋನ್ ಮಾನವನ ಶಾರೀರಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ದೇಹದೊಳಗಿನ ಹೃದಯ, ಚಯಾಪಚಯ ವ್ಯವಸ್ಥೆ ಇತ್ಯಾದಿಗಳಂತಹ ಪ್ರಮುಖ ಅಂಗಾಂಗಳನ್ನು ನಿಯಂತ್ರಿಸುತ್ತದೆ. ಸಾಮಾನ್ಯವಾಗಿ ಇದರ ಟಿಎಸ್‌ಎಚ್ 0.5 ದಿಂದ 5ಐಯು ಆಗಿರುತ್ತದೆ. ಒಂದು ವೇಳೆ ಟಿಎಸ್‌ಎಚ್ ಮಟ್ಟವು ಸಹಜಕ್ಕಿಂತ ಅಧಿಕವಾಗಿದ್ದಲ್ಲಿ, ಇದನ್ನು ಹೈಪೋ ಥೈರಾಯ್ಡ್ ಎಂದು ಕರೆಯಲಾಗುತ್ತದೆ ಮತ್ತು ಸಹಜಕ್ಕಿಂತ ಕಡಿಮೆಯಾಗಿದ್ದಲ್ಲಿ ಹೈಪರ್ ಥೈರಾಯ್ಡ್ ಎಂದು ಕರೆಯಲಾಗುತ್ತದೆ.

**ಪ್ರಕರಣ ಅಧ್ಯಯನ:** ಕಾನ್‌ಸ್ಟಿಟ್ಯೂಷನಲ್ ಹೋಮಿಯೋಪತಿಯಲ್ಲಿ ಪ್ರಕರಣದ ಅಧ್ಯಯನವು ಬಹು ಮುಖ್ಯವಾಗಿರುತ್ತದೆ. ಇದರಲ್ಲಿ ವೈದ್ಯರು ಕೇವಲ ರೋಗಿಯು ಹೇಳುವ ಸಮಸ್ಯೆಗಳನ್ನಷ್ಟೆ ಅಲ್ಲದೆ, ರೋಗಿಯ ಮಾನಸಿಕ ಮತ್ತು ದೈಹಿಕ ಸ್ಥಿತಿಗತಿ ಹಾಗೂ ಅವರ ಜೀವನಶೈಲಿಯನ್ನು ಕೂಡ ಪರಿಗಣಿಸುತ್ತಾರೆ.

## ಥೈರಾಯ್ಡ್ ಲಕ್ಷಣಗಳು ಮತ್ತು ಚಿಹ್ನೆಗಳು

1. ಪ್ರಚೋದನಾತ್ಮಕ ಅಥವಾ ಖಿನ್ನತೆ ಭಾವ
2. ಮಲಬದ್ಧತೆ
3. ಆಲಸ್ಯ ಮತ್ತು ಸಹಜತೆ ಮೀರಿದ ಜಡತೆ
4. ಶುಷ್ಕ ತ್ವಚೆ, ಉಗುರು ಸೀಳುವಿಕೆ
5. ಕೂದಲು ಉದುರುವಿಕೆ
6. ತೂಕ ಹೆಚ್ಚಾಗುವುದು ಅಥವಾ ಕಡಿಮೆಗೊಳ್ಳುವುದು
7. ಪದೇ ಪದೇ ಸ್ನಾಯು ನೋವು
8. ತಲೆ ಮಂಕಾಗುವುದು
9. ಅಧಿಕ ರಕ್ತದೊತ್ತಡ
10. ಹಸಿವಿನ ಕೊರತೆ



**ಪಡೆಯಿರಿ 300/- ಸಮಾಲೋಚನೆ ಉಚಿತ ವೈದ್ಯರೊಂದಿಗೆ ಮಾತನಾಡಲು: 90360 60319**


An ISO 9001 - 2000 Certified ®

The art of healing

Positive Homeopathy

www.positivehomeopathy.com

Dr.Kiran's Homeo LIFE

ಇದು ಪಾಸಿಟಿವ್ ಹೋಮಿಯೋಪತಿ ಅಂಗ ಸಂಸ್ಥೆ

www.homeolife.in

**ಕರ್ನಾಟಕ:** ಮಲ್ಲೇಶ್ವರಂ ▪ ಕೋರಮಂಗಲ ▪ ರಾಜಾಜಿನಗರ ▪ ಇಂದಿರಾನಗರ ▪ ಜಯನಗರ ▪ ಹುಬ್ಬಳ್ಳಿ ▪ ಮಂಗಳೂರು ▪ ಬೆಳಗಾವಿ ▪ ದಾವಣಗೆರೆ ▪ ಗುಲ್ಬರ್ಗಾ ▪ ಮೈಸೂರು | ಆಂಧ್ರಪ್ರದೇಶ